ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 409

ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 18-02-2022.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಡಿಗೆ ಮಳಿಗೆಗಳಿಗೆ ಬಾಡಿಗೆಗೆ ನಿಗಧಿಗೆ ಇರುವ ಮಾನದಂಡಗಳು ಯಾವುವು;	ಗ್ರಾಮ ಪಂಚಾಯಿತಿ ಸಾಮಾನ್ಯ ಸಭೆಯ ಅನುಮೋದನೆ ಪಡೆದು ಬಾಡಿಗೆ ಮಳಿಗೆಗಳಿಗೆ ಬಾಡಿಗೆ ದರಗಳನ್ವಯ ಹರಾಜು ಪ್ರಕ್ರಿಯೆಯನ್ನು ನಡೆಸಿ ಬಾಡಿಗೆ ದರವನ್ನು ನಿಗಧಿಪಡಿಸಲಾಗುತ್ತದೆ.
(ಆ)	ಒಟ್ಟು ಪಂಚಾಯಿತಿ ವ್ಯಾಪ್ತಿಯಡಿಯಲ್ಲಿ ಬಾಡಿಗೆ ನೀಡಿರುವ ಮಳಿಗೆಗಳ ಸಂಖ್ಯೆ ಎಷ್ಟು; ಮತ್ತು ವಸೂಲಿಗೆ ಕ್ರಮವೇನು ಹಾಗೂ ಬಾಡಿಗೆ ವಸೂಲಿ ಮಾಡದ ಗ್ರಾಮ ಪಂಚಾಯಿತಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ;	ಬಾಡಿಗೆ ನೀಡಿರುವ ಮಳಿಗೆಗಳ ಸಂಖ್ಯೆ 9155. ನ್ಯಾಯಾಲಯದಲ್ಲಿ ದಾವೆ ಹೂಡಿರುವ ಪ್ರಕರಣಗಳನ್ನು ಹೊರತುಪಡಿಸಿ ಬಾಡಿಗೆಗೆ ವಹಿಸಲಾದ ಮಳಿಗೆಗಳಿಗೆ ಸಂಬಂಧಿಸಿದ ಮಾಸಿಕ ಬಾಡಿಗೆಯನ್ನು ಗ್ರಾಮ ಪಂಚಾಯಿತಿಗಳಿಂದ ವಸೂಲಿ ಮಾಡಲಾಗುತ್ತಿದೆ.
(ಇ)	1974 ರ ಕೆ.ಪಿ.ಪಿ. ಆಕ್ಟ್ ಸೆಕ್ಷನ್ 3ರ ಪ್ರಕಾರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ನೋಟೀಸ್ ನೀಡುವ, ಹೊರ ಹಾಕುವ ಸಕ್ಷಮ ಅಧಿಕಾರಿ ಯಾರು;	KARNATAKA PUBLIC PREMISES (EVICTION OF UNAUTHORISED OCCUPANS) ACT, 1974 ರ ಪ್ರಕರಣ 3 ರಡಿ ತಾಲ್ಲೂಕು ಪಂಚಾಯಿತಿ ಮತ್ತು ಗ್ರಾಮ ಪಂಚಾಯಿತಿಗೆ ಸಂಬಂಧಿಸಿದ ಆವರಣಗಳಲ್ಲಿ (ಆಸ್ತಿಗಳಲ್ಲಿ) ಅನಧಿಕೃತ ಅಧಿಭೋಗದಾರರನ್ನು ಹೊರಹಾಕಲು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ರವರನ್ನು ಸಕ್ಷಮ ಪ್ರಾಧಿಕಾರಿಯನ್ನಾಗಿ ನೇಮಕ ಮಾಡಿ ಆದೇಶಿಸಲಾಗಿದೆ.
(ಈ)	ರಾಜ್ಯದಲ್ಲಿರುವಂತಹ ಪಂಚಾಯಿತಿಗಳ ಆಸ್ತಿ ಎಷ್ಟು; ಎಷ್ಟು ಆದಾಯ ಸಂದಾಯವಾಗುತ್ತಿದೆ; ಯಾವ ಕಾರಣಕ್ಕಾಗಿ ಕಡಿಮೆ ಆದಾಯ ಸಂದಾಯವಾಗುತ್ತಿದೆ; ಕಾರಣವೇನು?	ಗ್ರಾಮ ಪಂಚಾಯಿತಿಗಳ ಆಸ್ತಿಗಳ ಸಂಖ್ಯೆ: 8461, ಸಂದಾಯವಾಗಿರುವ ಆದಾಯ ರೂ. 463.85 ಲಕ್ಷಗಳು. ಕಳೆದ 2 ವರ್ಷಗಳಿಂದ ಕೋವಿಡ್-19 ರ ಸಾಂಕ್ರಾಮಿಕ ರೋಗದಿಂದಾಗಿ ಲಾಕ್‌ಡೌನ್ ವಿಧಿಸಿದ ಪ್ರಯುಕ್ತ ಎಲ್ಲಾ ವಹಿವಾಟುಗಳಿಗೆ ಅಡಚಣೆಯಾಗಿರುವುದರಿಂದ ಕಡಿಮೆ ಆದಾಯ ಸಂದಾಯವಾಗಿರುತ್ತದೆ.

ಸಂ. ಗ್ರಾಅಪ 28 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.